

ಫಾರ್‌ಬಿಡನ್ ನಗರ ಚಿತ್ರ: ಪ್ರದೀಪ್ ವಿ.

ಚೀನಾದ ರಾಜಧಾನಿಯಾದ ಬೀಜಿಂಗ್ ನಗರದ ನಟ್ಟ ನಡುವಿನಲ್ಲಿ ನಗರದೊಳಗೊಂದು ನಗರವಿದೆ. ಆದರಿದು 'ಪ್ರವೇಶವಿಲ್ಲದ ನಗರ'. ಈ ನಗರದ ಒಳಗೆ ಯಾರಿಗೂ ಅಪ್ಪಣೆ ಇಲ್ಲದೆ ಪ್ರವೇಶವಿರಲಿಲ್ಲ ಹಾಗೂ ಅಪ್ಪಣೆ ಇಲ್ಲದೆ ಹೊರಗೆ ಹೋಗುವಂತಿರಲಿಲ್ಲ.

ಇದು ಒಂದು ಕಾಲದಲ್ಲಿ ರಾಜ, ರಾಜ ಮನೆತನದವರ ಅರಮನೆ ಮತ್ತು ರಾಜಕೀಯ, ಧಾರ್ಮಿಕ ಹಾಗೂ ಸಾಂಪ್ರದಾಯಿಕ ಕೇಂದ್ರವಾಗಿತ್ತು, 1987ರಲ್ಲಿ 'ವರ್ಲ್ಡ್ ಹೆರಿಟೇಜ್ ಸೈಟ್' (ವಿಶ್ವ ಪಾರಂಪರಿಕ ತಾಣ) ಎಂದು ಗುರುತಿಸಲ್ಪಟ್ಟಿದ್ದು, **UNESCO** ದವರು ಇದನ್ನು 'ಅತ್ಯಂತ ಜಾಸ್ತಿ ಮರದ ಕಟ್ಟಡ' ಗಳಿರುವ ತಾಣವೆಂದು ಗುರುತಿಸಿದ್ದಾರೆ. ಈಗ ಇದನ್ನು ಅಧಿಕೃತವಾಗಿ 'ಮ್ಯೂಸಿಯಂ ಅರಮನೆ' ಎಂದು ಕರೆಯುತ್ತಿದ್ದು, ಚೀನಾದ ಇತಿಹಾಸ ಮತ್ತು ಸಂಸ್ಕೃತಿಗೆ ಕನ್ನಡಿ ಹಿಡಿಯುತ್ತಿದೆ.

ಈ ಅರಮನೆ ಪ್ರಪಂಚದ 5 ಮುಖ್ಯ ಅರಮನೆಗಳಲ್ಲೊಂದು (ಉಳಿದ ನಾಲ್ಕು ಅರಮನೆಗಳು ಅಮೆರಿಕ, ಫ್ರಾನ್ಸ್, ಇಂಗ್ಲೆಂಡ್ ಮತ್ತು ರಷ್ಯದಲ್ಲಿವೆ). ಪ್ರತಿದಿನ ಸರಾಸರಿ ಎಂಬತ್ತು ಸಾವಿರ ಜನರು ಇಲ್ಲಿಗೆ ಭೇಟಿ ನೀಡುತ್ತಿದ್ದಾರೆ. ಇದರ ಕೆಲವು ಭಾಗಗಳನ್ನು ನವೀಕರಣದ ಸಲುವಾಗಿ ಮುಚ್ಚಿದ್ದು, ನವೀಕರಣದ ಕಾರ್ಯವು 2020 ರಲ್ಲಿ ಮುಗಿಯುತ್ತದಂತೆ. ಈ ಕಾಮಗಾರಿಗೆ ಚೀನಾ ಸರ್ಕಾರ ಕೋಟಿಗಟ್ಟಲೆ ಹಣವನ್ನು ಸುರಿಯುತ್ತಿದೆ. ಚೀನಾವು ಎಲ್ಲದರಲ್ಲಿಯೂ ಮುಂದು, ಅತೀ ಕಡಿಮೆ ಬೆಲೆಗೆ ವಸ್ತುಗಳನ್ನು ತಯಾರಿಸಿ ಪ್ರಪಂಚದ ಮಾರುಕಟ್ಟೆಗೆ ಬಿಡುವುದಲ್ಲಿರಲಿ, ಅಗ್ಗದ ಅಕ್ಕಿ (ಪ್ಲಾಸ್ಟಿಕ್ ಅಕ್ಕಿ!) ಬೆಳೆಯುವುದಲ್ಲಿರಲಿ, ಹಾಗೆಯೇ ಇತಿಹಾಸವನ್ನು ಉಳಿಸಿ, ಪ್ರದರ್ಶಿಸುವುದರಲ್ಲಿರಲಿ.

ಪ್ರವೇಶವಿಲ್ಲದ ಈ ನಗರವನ್ನು ಕ್ರಿ.ಶ.1406– 1420ರ ನಡುವೆ ಸುಮಾರು 180 ಎಕರೆ ಜಾಗದಲ್ಲಿ ಕಟ್ಟಿಸಿದ್ದರೆಂದೂ, ಇದರಲ್ಲಿ ಸುಮಾರು 980 ಕಟ್ಟಡಗಳಿದ್ದು, 9999 ಕೊಠಡಿಗಳಿವೆಯೆಂದೂ ಇತಿಹಾಸ ಹೇಳುತ್ತದೆ. ಕಟ್ಟಡಗಳ ಅಡಿಗಲ್ಲು ಕಲ್ಲಿನದಾಗಿದ್ದು, ಗೋಡೆಗಳು ಇಟ್ಟಿಗೆಯಿಂದ ಮಾಡಲ್ಪಟ್ಟಿದ್ದರೂ, ಮರವನ್ನು ಧಾರಾಳವಾಗಿ ಬಳಸಲಾಗಿದೆ.



